## ದೃಷ್ಟಿಕೋನ!

ಮುಂಜಾವಿನ ವಾಕಿಂಗ್ ನಂತರ ಡಾಕ್ಟರ್‌ಗಳ ಗುಂಪೊಂದು ರಸ್ತೆಬದಿಯ ಗೂಡಂಗಡಿಯಲ್ಲಿ ಚಹಾ ಸೇವಿಸುತ್ತಾ ನಿಂತಿತ್ತು.

ದೂರದಲ್ಲಿ ಓರ್ವ ವ್ಯಕ್ತಿ ಕುಂಟುತ್ತಾ ನಡೆದು ಬರುತ್ತಿರುವುದನ್ನು ಗಮನಿಸಿದ ಅವರಲ್ಲೊಬ್ಬ ವೈದ್ಯ ಹೇಳಿದ, 'ಆತನ ಎಡ ಮೊಣಕಾಲಿಗೆ ಆರ್ಥ್ರೈಟಿಸ್ ತೊಂದರೆಯಿದೆ.' ಇನ್ನೊಬ್ಬ ಡಾಕ್ಟರ್ ಉಸುರಿದ, 'ಇಲ್ಲ, ಆತನ ಪಾದ ಉಳುಕಿದೆ ಅಷ್ಟೆ.' ಮತ್ತೋರ್ವ ವೈದ್ಯ, 'ಆತನ ಕಾಲಡಿಯಲ್ಲಿ ಕಾರ್ನ್ (ಆಣಿ) ಆಗಿದೆ.' ನಾಲ್ಕನೆಯಾತ ಸ್ಪಷ್ಟೀಕರಿಸಿದ, 'ಕೊಂಚ ಸರಿಯಾಗಿ ಗಮನಿಸಿ, ನನಗೇನೋ ಆತನಿಗೆ ಹೆಮಿಪ್ಲೇಗಿಯಾದ 'ಸಿಸರ್ಸ್ ಗೇಟ್' ತೊಂದರೆಯಿರುವಂತೆ ಗೋಚರಿಸುತ್ತಿದೆ.'



ಅಷ್ಟರಲ್ಲಿ ಬಳಿಸಾರಿ ಬಂದ ಆ ವ್ಯಕ್ತಿ ಇವರ ಗುಂಪಲ್ಲಿ ವಿಚಾರಿಸಿದ, 'ಇಲ್ಲಿ ಚಮ್ಮಾರನ ಅಂಗಡಿ ಎಲ್ಲಿದೆ? ನನ್ನ ಚಪ್ಪಲಿಯ ಉಂಗುಷ್ಟ ತುಂಡಾಗಿದೆ...'

**ರಮಣ್ ಶೆಟ್ಟಿ ರೆಂಜಾಳ್**



## ಪಾಯಸ ಮಾತ್ರ ಬೇಡ...

ಡಾಕ್ಟರರ ಬಳಿ ಬಂದ ರೋಗಿ ಹೇಳಿದ, 'ಸಾರ್, ತುಂಬಾ ಭೇದಿ ಆಗ್ತಿದೆ, ಬೆಳಗಿನಿಂದ 7 ಸಲ ಹೋಗಿದ್ದೀನಿ. ಏನು ಮಾಡಿದರೂ ನಿಲ್ತಾ ಇಲ್ಲ... ನೋಡೋಕೆ ಒಳ್ಳೆ ಮಾವಿನ ಹಣ್ಣಿನ ಪಾಯಸದ ಥರಾ ಇರುತ್ತೆ!'

ಡಾಕ್ಟರು ಮುಖ ಹುಳ್ಳಗೆ ಮಾಡಿ ಮಾತ್ರೆ ಬರೆದುಕೊಟ್ಟು ಕಳಿಸಿದರು. ಇದ್ದಕ್ಕಿದ್ದಂತೆ ಹೆಂಡತಿ ನಿನ್ನೆ ಮಾವಿನಹಣ್ಣು ತಂದ ನೆನಪಾಯ್ತು. ಕೂಡಲೇ ಪತ್ನಿಗೆ ಫೋನ್ ಮಾಡಿದರು, 'ಚಿನ್ನಾ, ಇವತ್ತು ನನ್ನ ಬರ್ತ್‌ಡೇಗೆ ಸ್ವೀಟ್ ಏನಾದರೂ ಮಾಡು, ಮಾವಿನ ಹಣ್ಣಿನ ಪಾಯಸ ಮಾತ್ರ ಬೇಡ...'

**ಕೆ. ಆದಿತ್ಯ ಹೆಬ್ಬಾರ್**